**ಪ್ರ.ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**(ಸಂಚಾರಿ ನ್ಯಾಯಾಲಯ ಅಜ್ಜಂಪುರ)**

**ಸಿ.ಸಿ ಸಂಖ್ಯೆ ::427/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಗಣೇಶ್ | **PW-7** |
| **ತಂದೆಯ ಹೆಸರು** | : | ಬಾಬುಶೆಟ್ಟಿ | **CW-6** |
| **ವಯಸ್ಸು** | : | 40 ವರ್ಷ | |
| **ಉದ್ಯೋಗ** | : | ಅಕ್ಕಸಾಲಿಗ | |
| **ವಾಸಸ್ಥಳ** | : | ಕೆ ಬಿದರೆ, ಅಜ್ಜಂಪುರ | |

**ದಿನಾಂಕಃ12-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 299 ರಡಿಯಲ್ಲಿ)**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ನಾನು ಚಿನ್ನಬೆಳ್ಳಿ ಕೆಲಸ ಮಾಡಿಕೊಂಡಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 21.05.2014 ರಂದು ಪೊಲೀಸರು ನನ್ನ ಅಂಗಡಿ ಬಳಿ ಬಂದು ಅವರಿಗೆ ಇದ್ದ ಮಾಹಿತಿಯ ಮೇರೆಗೆ ಒಂದು ದಾಳಿ ನಡೆಸಬೇಕಾಗಿದೆ ಎಂದು ಹೇಳಿ ಅಮಾನತ್ತುಪಡಿಸಿಕೊಳ್ಳಬಹುದಾದ ಆಭರಣಗಳಿಗೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡಬೇಕೆಂದು ನನ್ನನ್ನು ಅವರ ಜೊತೆ ಕರೆದುಕೊಂಡು ಹೋಗಿರುತ್ತಾರೆ. ಆ ರೀತಿ ನಾನು ಅವರ ಜೀಪಿನಲ್ಲಿ ದಾಳಿ ಸ್ಥಳಕ್ಕೆ ಹೋಗಿ ಪೊಲೀಸರು 3 ಜನ ಆರೋಪಿಗಳನ್ನು ಹಿಡಿದು ಅವರನ್ನು ವಿಚಾರಿಸಿದಾಗ ಅವರ ಬಳಿ ಚಿನ್ನ ಮತ್ತು ಬೆಳ್ಳಿಯಂತೆ ಕಾಣುವ ವಸ್ತುಗಳು

ದೊರೆತ್ತಿರುತ್ತವೆ. ಅವುಗಳನ್ನು ನನಗೆ ಪರಿಶೀಲನೆ ಮಾಡಲು ಹೇಳಲಾಗಿ ನಾನು ಅದನ್ನು ಪರೀಕ್ಷೆ ಮಾಡಿ ನೋಡಿದಾಗ ಅಲ್ಲಿ ಸುಮಾರು 20 ಗ್ರಾಂ ಬಂಗಾರದ ಆಭರಣ ಹಾಗೂ ಮೂರು ಕಾಲು ಕೆ ಜಿ ತೂಕದ ಬೆಳ್ಳಿಯ ಗಟ್ಟಿ ದೊರೆತಿರುತ್ತವೆ. ಇದರ ಬಗ್ಗೆ ನನ್ನ ಸಮಕ್ಷಮ ನಿಪಿ6 ರಂತೆ ಮಹಜರ್ ಸಹ ತಯಾರಿಸಿದ್ದು, ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ6 ಮಹಜರ್ ನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ6 ಬಿ ಎಂದು ಗುರುತಿಸಲಾಯಿತು.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ
(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: